**ಸಾಕ್ಷಿಯನ್ನು ದಿಃ 23.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಜಿ ಎನ್ ಆರ್ ರವರಿಂದಃ**

ಪಿ ಸಿ ಆರ್ ಸಂಖ್ಯೆ 91/2014 ರಲ್ಲಿನ ಆರೋಪಿ ಮಧು ನನ್ನ ಅಣ್ಣ. ನನ್ನ ಅಣ್ಣ ವ್ಯವಸಾಯ ಮಾಡುತ್ತಾರೆ. ಸುಮಾರು 15-16 ವರ್ಷಗಳಿಂದ ನನ್ನ ಅಣ್ಣ ಬೇರೆ ವಾಸವಿದ್ದಾರೆ. ನಿಪಿ-15 ರಿಂದ ನಿಪಿ-21 ರ ದಾಖಲೆಗಳನ್ನು ನಮ್ಮ ವಕೀಲರು ನ್ಯಾಯಾಲಯದಿಂದ ಪಡೆದಿರುತ್ತಾರೆ. ಎದುರುದಾರರು ಮತ್ತು ಮಧುರವರ ನಡುವಿನ ವ್ಯವಹಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಏಜೆಂಟ್ ಚೀಟಿಯ ವ್ಯವಹಾರದಲ್ಲಿ ನನ್ನ ಅಣ್ಣ ಎದುರುದಾರರಿಗೆ ಚೆಕ್ ನ್ನು ನೀಡಿದ್ದರು. ಈ ಮುಖ್ಯ ಅರ್ಜಿಗೂ ನಿಪಿ-15 ರಿಂದ ನಿಪಿ-21 ರ ದಾಖಲೆಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಮುಖ್ಯ ಅರ್ಜಿಯಲ್ಲಿ ಕಾಲವಿಳಂಬ ಮಾಡುವ ಉದ್ದೇಶದಿಂದ ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**